ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸಂ.ಸ್ನಾ ಹಾಗೂ ಸ್ನಾ.ಪಾ–01/2023–24 ದಿನಾಂಕ: 25.01.2024

## ಪರೀಕ್ಷಾ ಅಧಿಸೂಚನೆ

**ವಿಷಯ: 2023–24ನೇ ಸಾಲಿನ ಸ್ನಾತಕ–ಸ್ನಾತಕೋತ್ತರ ಪರೀಕ್ಷೆಗಳನ್ನು ನಡೆಸುವ ಬಗೆಗೆ.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ಕಂಡಿಕೆ ಸಂಖ್ಯೆ: 04; ದಿನಾಂಕ: 19.01.2024.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರ ಹಾಗೂ ಮಾನ್ಯತೆಗೊಳಪಟ್ಟ ಸಂಸ್ಕೃತ ಮಹಾವಿದ್ಯಾಲಯಗಳ 2023–24ನೇ ಸಾಲಿನ ಶಾಸ್ತ್ರೀ–ಬಿ.ಎ., ಬಿ.ಎ.–ಸಂಸ್ಕೃತ, ಬಿ.ಎ.–ಶಾಸ್ತ್ರ, ಬಿ.ಎಸ್ಸಿ. ಪದವಿಗಳ ಪ್ರಥಮ, ತೃತೀಯ ಹಾಗೂ ಪಂಚಮ ಮತ್ತು ಆಚಾರ್ಯ–ಎಂ.ಎ., ಎಂ.ಎ.–ಸಂಸ್ಕೃತ ಮತ್ತು ಎಂ.ಎಸ್ಸಿ. ಪದವಿಗಳ ಪ್ರಥಮ ಹಾಗೂ ತೃತೀಯ ಷಾಣ್ಮಾಸಿಕ ಪರೀಕ್ಷೆಗಳಿಗೆ ನೂತನ (Fresher) ಮತ್ತು ಪುನರಾವರ್ತಿತ (Repeaters)(UUCMS & Non-UUCMS)ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ವಿವರಗಳು | ಅಂತಿಮ ದಿನಾಂಕ |
|---|---|---|
| 1 | ವಿದ್ಯಾರ್ಥಿಗಳು uucms.karnataka.gov.in ಮುಖಾಂತರ ಪ್ರವೇಶಿಸಿ ವಿದ್ಯಾರ್ಥಿಗಳ ಲಾಗಿನ್ ಐ.ಡಿ.ಯಲ್ಲಿ ಪರೀಕ್ಷಾ ಅರ್ಜಿಗಳನ್ನು ತುಂಬಲು ಮತ್ತು ಪರೀಕ್ಷಾ ಶುಲ್ಕಗಳನ್ನು SBI Payment Gateway ಮುಖಾಂತರ ದಂಡರಹಿತವಾಗಿ ಪಾವತಿಸಲು ಅಂತಿಮ ದಿನಾಂಕ | **05.02.2024** |
| 2 | ದಂಡ ಶುಲ್ಕ ರೂ. 100/– ಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (with 1st penalty–Rs. 100/–) | **06.02.2024** |
| 3 | ದಂಡ ಶುಲ್ಕ ರೂ. 200/– ಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (with 2ndpenalty–Rs. 200/–) | **07.02.2024** |
| 4 | UUCMS ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿದ ಮಾಹಿತಿಯನ್ನು ಹಾಗೂ Non UUCMS ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಗಳನ್ನು ಸಂಬಂಧಪಟ್ಟ ಕಾಲೇಜಿಗೆ/ಅಧ್ಯಯನಾಂಗಕ್ಕೆ ಸಲ್ಲಿಸಲು ಕೊನೆಯ ದಿನಾಂಕ | **07.02.2024** |
| 5 | UUCMS Portalನಲ್ಲಿ ಆಂತರಿಕ ಅಂಕಗಳನ್ನು IA (Internal Assessment) ನಮೂದಿಸಲು ಕಾಲಾವಕಾಶ | **25.01.2024 ರಿಂದ 08.02.2024** |
| 6 | ಕಾಲೇಜುಗಳಿಂದ ಹಾಗೂ ಅಧ್ಯಯನಾಂಗದಿಂದ ವಿದ್ಯಾರ್ಥಿಗಳು ಪಾವತಿಸಿರುವ ಪರೀಕ್ಷಾ ಶುಲ್ಕಗಳ ಮಾಹಿತಿಯನ್ನು ಅನುಬಂಧ–1ರಲ್ಲಿ ಕ್ರೋಢೀಕರಿಸಿ ವಿಶ್ವವಿದ್ಯಾಲಯದ ಪರೀಕ್ಷಾಂಗಕ್ಕೆ ಸಲ್ಲಿಸಲು ಕೊನೆಯ ದಿನಾಂಕ | **12.02.2024** |
| 7 | ಸಂಬಂಧಪಟ್ಟ ಕಾಲೇಜಿನವರು ಪ್ರವೇಶಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಕಾಲಾವಕಾಶ | **13.02.2024 ರಿಂದ 14.02.2024** |
| 8 | ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಕೊನೆಯ ದಿನಾಂಕ | **17.02.2024** |
| 9 | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | **19.02.2024** |

**ಸೂಚನೆಗಳು:**

- ವಿದ್ಯಾರ್ಥಿಗಳು UUCMSನಲ್ಲಿ Course Registration ಮಾಡಿರದಿದ್ದಲ್ಲಿ ಪರೀಕ್ಷಾ ಅರ್ಜಿಯನ್ನು UUCMSನಲ್ಲಿ ಸಲ್ಲಿಸಲು ಅವಕಾಶವಿರುವುದಿಲ್ಲ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪ್ರಾಂಶುಪಾಲರು ಅಥವಾ ವಿಭಾಗಾಧ್ಯಕ್ಷರನ್ನು ಸಂಪರ್ಕಿಸುವುದು. ಈ

ಕುರಿತು ಯಾವುದೇ ಸಮಸ್ಯೆಗಳಿದ್ದರೂ ಅಧೀನ ಮಹಾವಿದ್ಯಾಲಯದ ವಿದ್ಯಾರ್ಥಿಗಳು/ಪ್ರಾಂಶುಪಾಲರು ವಿಶ್ವವಿದ್ಯಾಲಯದ ಸಿ.ಡಿ.ಸಿ. ವಿಭಾಗವನ್ನು ಮತ್ತು ಕಸಂವಿ ಪರಿಸರದ ವಿದ್ಯಾರ್ಥಿಗಳು/ವಿಭಾಗಾಧ್ಯಕ್ಷರು ಅಧ್ಯಯನಾಂಗವನ್ನು ಸಂಪರ್ಕಿಸಿ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು. UUCMSನಲ್ಲಿ ವಿದ್ಯಾರ್ಥಿಗಳು ಮಾಡಿಕೊಂಡ Course Registrationಗಳಿಗೆ ಪ್ರಾಂಶುಪಾಲರು/ ವಿಭಾಗಾಧ್ಯಕ್ಷರು UUCMSನಲ್ಲಿ approval ನೀಡಿದ ನಂತರವೇ ಪರೀಕ್ಷಾ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುತ್ತದೆ. ಆದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ UUCMS ಹಾಗೂ Non-UUCMS ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸಲು SBI Payment Gateway ಮೂಲಕ ಅವಕಾಶ ಕಲ್ಪಿಸಿರುವುದರಿಂದ, ಅಂತಿಮ ದಿನಾಂಕದೊಳಗೆ ಎಲ್ಲ ವಿದ್ಯಾರ್ಥಿಗಳೂ ಪರೀಕ್ಷಾ ಶುಲ್ಕವನ್ನು ಪಾವತಿಸಬಹುದಾಗಿದೆ.

- ಮಾನ್ಯತೆಗೊಳಪಟ್ಟ ಮಹಾವಿದ್ಯಾಲಯಗಳು Non-UUCMS ಹಾಗೂ UUCMS ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಸಂಗ್ರಹಿಸಿ, ಎಲ್ಲಾ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಒಟ್ಟಿಗೆ SBI Payment gateway ಮೂಲಕ ಅಂತಿಮ ದಿನಾಂಕದೊಳಗೆ ಪಾವತಿಸುವುದು. ದಂಡಸಹಿತ ಪರೀಕ್ಷಾ ಶುಲ್ಕವನ್ನು ಪಾವತಿಸುವ ಸಂದರ್ಭದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯಿಂದಲೂ ದಂಡಶುಲ್ಕವನ್ನು ಪಡೆದು, SBI Payment gateway ಮೂಲಕ ಪಾವತಿಸುವುದು ಹಾಗೂ ಆ ವಿದ್ಯಾರ್ಥಿಗಳ ವಿವರಗಳನ್ನು ಪ್ರತ್ಯೇಕವಾಗಿ ಪರೀಕ್ಷಾಂಗಕ್ಕೆ ಸಲ್ಲಿಸುವುದು.
- ಕಸಂವಿ ಪರಿಸರದ ವಿದ್ಯಾರ್ಥಿಗಳು ನಿಗದಿತ ಪರೀಕ್ಷಾ ಶುಲ್ಕವನ್ನು ವೈಯಕ್ತಿಕವಾಗಿ SBI Payment gateway ಮೂಲಕ ಪಾವತಿಸುವುದು.
- SBI Payment gatewayಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣ ksu.ac.in ನಲ್ಲಿರುವ 'Online Fee Payment Link ಮೂಲಕ ಈ ಕೆಳಗಿನಂತೆ ಪ್ರವೇಶಿಸಬಹುದಾಗಿರುತ್ತದೆ.

  Online Fee Payment ⇨ **KARNATAKA SANSKRITH VISHWAVIDYALAYA(Karnataka)** ⇨ **Payment Category: UG & PG Exam Fees –** ಇಲ್ಲಿಗೆ ಹೋಗಿ, ಮುಂದೆ ಸೂಚಿಸಿರುವ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಿ ಪರೀಕ್ಷಾ ಶುಲ್ಕವನ್ನು ಪಾವತಿಸುವುದು.

**ಕಸಂವಿ ಪರಿಸರ ಹಾಗೂ ಕಾಲೇಜುಗಳ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕಗಳ ವಿವರ:**

| ಕ್ರ.ಸಂ. | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ | ವಿನಾಯಿತಿ ಶುಲ್ಕ | Fees of Foreign Students |
|---|---|---|---|---|
| | | OBC & General | SC-ST/CAT-1 | |
| 1 | ಸಂಸ್ಕೃತ ಬಿ.ಎ/ಶಾಸ್ತ್ರಿ 1ನೇ ಸೆಮಿಸ್ಟರ್ | ರೂ. 400/- | ರೂ. 200/- | US $ 8 |
| 2 | ಬಿ.ಎಸ್‌ಸಿ. 1ನೇ ಸೆಮಿಸ್ಟರ್ | ರೂ. 400/- | ರೂ. 200/- | US $ 8 |
| 3 | ಸಂಸ್ಕೃತ/ವೇದ ಬಿ.ಎ./ಶಾಸ್ತ್ರಿ 3ನೇ ಸೆಮಿಸ್ಟರ್ | ರೂ. 450/- | ರೂ. 225/- | US $ 10 |
| 4 | ಸಂಸ್ಕೃತ ಬಿ.ಎ/ಶಾಸ್ತ್ರಿ 5ನೇ ಸೆಮಿಸ್ಟರ್ | ರೂ. 500/- | ರೂ. 250/- | US $ 12 |
| 5 | ಸಂಸ್ಕೃತ/ವೇದ ಎಂ.ಎ./ಆಚಾರ್ಯ 1ನೇ ಮತ್ತು 3ನೇ ಸೆಮಿಸ್ಟರ್; M.Sc. 1$^{ST}$ Sem | ರೂ. 700/- | ರೂ. 350/- | US $ 15 |
| 6 | BA & MA – With 1$^{st}$ Penalty* | Exam Fee + 100.00 | | |
| 7 | BA & MA – With 2$^{nd}$ Penalty* | Exam Fee + 200.00 | | |
| 8 | ಪುನರಾವರ್ತಿತ-ಬಿ.ಎ./ಶಾಸ್ತ್ರಿ 1 ಮತ್ತು 3ನೇ ಸೆಮಿಸ್ಟರ್ | ಒಂದು ಪತ್ರಿಕೆಗೆ – ರೂ. 200.00 | | |
| 9 | ಪುನರಾವರ್ತಿತ – ಬಿ.ಎ./ಶಾಸ್ತ್ರಿ 1ನೇ ಸೆಮಿಸ್ಟರ್ | ಒಂದಕ್ಕಿಂತ ಹೆಚ್ಚು ಪತ್ರಿಕೆ ಇದ್ದಲ್ಲಿ – ರೂ. 400.00 | | |

| | | |
|---|---|---|
| 10 | ಪುನರಾವರ್ತಿತ – ಬಿ.ಎ/ಶಾಸ್ತ್ರಿ 3ನೇ ಸೆಮಿಸ್ಟರ್ | ಒಂದಕ್ಕಿಂತ ಹೆಚ್ಚು ಪತ್ರಿಕೆ ಇದ್ದಲ್ಲಿ – ರೂ. 450.00 |
| 11 | ಪುನರಾವರ್ತಿತ – ಎಂ.ಎ./ಆಚಾರ್ಯ 1 ಮತ್ತು 3ನೇ ಸೆಮಿಸ್ಟರ್ | ಒಂದು ಪತ್ರಿಕೆಗೆ – ರೂ. 200.00 |
| | | ಒಂದಕ್ಕಿಂತ ಹೆಚ್ಚು ಪತ್ರಿಕೆ ಇದ್ದಲ್ಲಿ – ರೂ. 700.00 |

* ದಂಡಶುಲ್ಕ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳ ಶುಲ್ಕದಲ್ಲಿ ವಿನಾಯಿತಿಯಿರುವುದಿಲ್ಲ.

1. ಸರ್ಕಾರದ ಆದೇಶ ಸಂಖ್ಯೆ: "ಇಡಿ **295 ಯುಎನ್‌ಇ 2018; ದಿನಾಂಕ: 23/01/2019**" ರಂತೆ ಹಾಗೂ ದಿನಾಂಕ: 13.03.2019 ರಂದು ನಡೆದ **ಪ್ರಶಾಸನ ಸಮಿತಿ** 51ನೇ ಸಭೆಯ ನಿರ್ಣಯದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಒಟ್ಟು ಪರೀಕ್ಷಾ ಶುಲ್ಕದಲ್ಲಿ ಶೇ. 50 ರಷ್ಟು ವಿನಾಯಿತಿಯನ್ನು ನೀಡಲಾಗಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣಪತ್ರದ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು. **ಜಾತಿ ಪ್ರಮಾಣಪತ್ರದ ಜೆರಾಕ್ಸ್ ಪ್ರತಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.**
2. ಒಂದು ವೇಳೆ ಪೋಷಕರ ವಾರ್ಷಿಕ ಆದಾಯ ರೂ. 2,50,000/– (ಎರಡು ಲಕ್ಷದ ಐವತ್ತು ಸಾವಿರ ರೂ.ಗಳು) ಮೀರಿದ್ದಲ್ಲಿ **(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1)** ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಪೂರ್ಣ ಶುಲ್ಕವನ್ನು ಭರಿಸತಕ್ಕದ್ದು.
3. **2020–21ನೇ ಸಾಲಿಗಿಂತಲೂ ಹಿಂದಿನ ಸಾಲಿನಲ್ಲಿ ಪ್ರವೇಶ ಪಡೆದ ಎಂ.ಎ. ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶವಿರುವುದಿಲ್ಲ.**
4. ಒಂದು ಬಾರಿ ಪಾವತಿಸಿದ ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
5. ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.
6. Non–UUCMSನ ಪ್ರತಿಯೊಬ್ಬ ವಿದ್ಯಾರ್ಥಿಯೂ ಪರೀಕ್ಷಾ ಶುಲ್ಕ ಪಾವತಿಸಿದ ಮಾಹಿತಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು ಹಾಗೂ UUCMSನ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಮಾಹಿತಿಯನ್ನು ಮತ್ತು ಶುಲ್ಕ ಪಾವತಿಸಿರುವ ಮಾಹಿತಿಯನ್ನು ನಿಗದಿಪಡಿಸಿದ ಅಂತಿಮ ದಿನಾಂಕದೊಂದಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ/ಅಧ್ಯಯನಾಂಗಕ್ಕೆ ಸಲ್ಲಿಸಬೇಕು.
7. ಭಾವಚಿತ್ರಗಳಿಲ್ಲದ ಹಾಗೂ "**ಕುಲಸಚಿವರು(ಮೌಲ್ಯಮಾಪನ)**" ಅಥವಾ "**ಪ್ರಾಂಶುಪಾಲರ**" ಸಹಿ ಇಲ್ಲದ ಪ್ರವೇಶಪತ್ರಗಳನ್ನು ಪರೀಕ್ಷಾ ಕೊಠಡಿಯಲ್ಲಿ ಹಾಜರುಪಡಿಸುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ಕೊಡುವುದಿಲ್ಲ.

**ಪ್ರಾಂಶುಪಾಲರು/ವಿಭಾಗಾಧ್ಯಕ್ಷರು/ಅಧ್ಯಯನಾಂಗ ಅನುಸರಿಸಬೇಕಾದ ವಿಧಾನಗಳು:**

1. ಎಲ್ಲಾ ಮಹಾವಿದ್ಯಾಲಯಗಳು ಕಡ್ಡಾಯವಾಗಿ ತಮ್ಮ ಕಾಲೇಜಿನ ಮಾನ್ಯತೆಯನ್ನು ನವೀಕರಿಸಿರಬೇಕು. ಮಾನ್ಯತೆ ನವೀಕರಿಸದೆ ಇದ್ದಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗಾಗುವ ತೊಂದರೆಗಳಿಗೆ ಆಡಳಿತ ಮಂಡಳಿ/ಪ್ರಾಂಶುಪಾಲರೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.
2. ಯಾವುದೇ ಅನುದಾನಿತ/ಅನುದಾನರಹಿತ ಸಂಸ್ಕೃತ ಪಾಠಶಾಲೆ/ಕಾಲೇಜಿನಲ್ಲಿ ಖಾಯಂ ಆಗಿ ಉದ್ಯೋಗದಲ್ಲಿರುವವರು / ಕಸಂವಿ ಪ್ರಶಾಸನ ಹಾಗೂ ಪ್ರಶಿಕ್ಷಣ ಸಮಿತಿಯ ಸದಸ್ಯರು/ಪಿ.ಹೆಚ್‌ಡಿ.–ವಿದ್ಯಾವಾರಿಧಿ ವಿದ್ಯಾರ್ಥಿಗಳು ಯಾವುದೇ ಕಾಲೇಜಿನಲ್ಲಿ ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ.
3. ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬದ್ಧ ಮಾಹಿತಿಗಳನ್ನು ಅಧಿಸೂಚನೆಯ ಕೊನೆಯಲ್ಲಿ ನೀಡಿರುವ ಮಾದರಿಯಂತೆ **(FORM-02)** ಕೇವಲ Microsoft excel sheetನಲ್ಲಿ ಕಳುಹಿಸಬೇಕು. Microsoft word, pdf, imageನಲ್ಲಿ ಕಳುಹಿಸಬಾರದು. Font Size–12, Font Name - Cambria (Headings) ಸಿದ್ಧಪಡಿಸುವುದು. **ವಿದ್ಯಾರ್ಥಿಗಳ ಮಾಹಿತಿಯನ್ನು** examksu2016@gmail.com ಈ ಇ–ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು ಮತ್ತು ಪ್ರತಿಯನ್ನು (hard copy) **'ಕುಲಸಚಿವರು(ಮೌಲ್ಯಮಾಪನ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ–560018'** ಈ ವಿಳಾಸಕ್ಕೆ ಕಳುಹಿಸುವುದು.

4. ಎಲ್ಲಾ Non–UUCMS ವಿದ್ಯಾರ್ಥಿಗಳ ಮಾಹಿತಿಯ ನಾಮಾಂಕಿತ ಪಟ್ಟಿಗಳನ್ನು ಅನುಬಂಧ–1ರಂತೆ ಪ್ರತ್ಯೇಕವಾಗಿ ಸಲ್ಲಿಸುವುದು.
5. ತರಗತಿವಾರು ಸಿದ್ಧಪಡಿಸಿದ ನಾಮಾಂಕಿತ ಪಟ್ಟಿಯ ಕೊನೆಯಲ್ಲಿ ಆಯಾಯ ಶಾಸ್ತ್ರಭಾಗಗಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ವರ್ಷ ಹಾಗೂ ಶುಲ್ಕದ ವಿವರಗಳನ್ನು ಸರಿಯಾಗಿ ನಮೂದಿಸುವುದು.
6. ನಾಮಾಂಕಿತ ಪಟ್ಟಿಗಳಲ್ಲಿ ಮತ್ತು ಅರ್ಜಿ ನಮೂನೆಗಳಲ್ಲಿ ಏನಾದರೂ ದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರು ನೇರ ಹೊಣೆಗಾರರಾಗಿರುತ್ತಾರೆ.

**ಹಾಜರಾತಿ ವಿಚಾರ:**

1. ವಿದ್ಯಾರ್ಥಿಗಳು ಪ್ರತಿ ಪತ್ರಿಕೆಯಲ್ಲಿ ಕನಿಷ್ಠ ಶೇ. 75ರಷ್ಟು ಹಾಜರಾತಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ವಿದ್ಯಾರ್ಥಿಗಳ ಹಾಜರಾತಿ ಪಟ್ಟಿಯಲ್ಲಿ ತರಗತಿ ಮಾಡಿದ ಅಧ್ಯಾಪಕರ ಹಸ್ತಾಕ್ಷರ ಹಾಗೂ ಮಾಸಾಂತ್ಯದಲ್ಲಿ ಪ್ರಾಂಶುಪಾಲರ/ವಿಭಾಗಾಧ್ಯಕ್ಷರ ಹಸ್ತಾಕ್ಷರವು ಕಡ್ಡಾಯವಾಗಿರುತ್ತದೆ. ಯಾವುದೇ ಸಂದರ್ಭದಲ್ಲಿಯೂ ಪರೀಕ್ಷಾಂಗವು ಹಾಜರಾತಿ ಕುರಿತಾದ ದಾಖಲೆಯನ್ನು ಕೇಳಬಹುದಾಗಿದ್ದು, ಅಂತಹ ಸಂದರ್ಭದಲ್ಲಿ ಪ್ರಾಂಶುಪಾಲರು/ವಿಭಾಗಾಧ್ಯಕ್ಷರು/ಅಧ್ಯಯನಾಂಗವು ಇದನ್ನು ದೃಢೀಕರಿಸಿ ಪರೀಕ್ಷಾಂಗಕ್ಕೆ ಸಲ್ಲಿಸಬೇಕಾಗುವುದು.

   1 ಕ್ರೆಡಿಟ್ = 16 ಘಂಟೆಗಳ ಬೋಧನಾವಧಿಯಾಗಿರುತ್ತದೆ. ಆದ್ದರಿಂದ ಪ್ರತಿ ಪತ್ರಿಕೆಗೆ ನಿಗದಿಪಡಿಸಿದ ಕ್ರೆಡಿಟ್‌ಗೆ ಅನುಗುಣವಾಗಿ ಒಟ್ಟು ಬೋಧನಾವಧಿಯು ಪ್ರತಿ ವಿಷಯದಲ್ಲಿಯೂ ಇರತಕ್ಕದ್ದು ಹಾಗೂ ಬೋಧನೆಯು ನಡೆದಿರಬೇಕು. (ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಗತ್ಯವಿರುವಲ್ಲಿ ಹೆಚ್ಚಿನ ತರಗತಿಗಳನ್ನು ನಡೆಸಬಹುದಾಗಿದೆ). ಪ್ರತಿ ಪತ್ರಿಕೆಯಲ್ಲಿ ನಡೆದ ಒಟ್ಟು ಬೋಧನಾವಧಿಯಲ್ಲಿ ಕನಿಷ್ಠ ಶೇ. 75 ರಷ್ಟು ಹಾಜರಾತಿ ಹೊಂದಿದ ವಿದ್ಯಾರ್ಥಿಯು ಮಾತ್ರ ಪರೀಕ್ಷೆ ಬರೆಯಲು ಅರ್ಹನಾಗಿರುತ್ತಾರೆ.

| ಕ್ರೆಡಿಟ್ ಸಂಖ್ಯೆ | ಬೋಧನಾವಧಿ | ಕನಿಷ್ಠ ಹಾಜರಾತಿ (75%) |
|---|---|---|
| 01 | 16 | 12 |
| 02 | 32 | 24 |
| 03 | 48 | 36 |
| 04 | 64 | 48 |

**ಆಂತರಿಕ ಅಂಕ ವಿಚಾರ:**

| ಕೋರ್ಸ್ ಮತ್ತು ಸೆಮಿಸ್ಟರ್ | C1 | C2 | C3 | C4 | ಒಟ್ಟು ಗರಿಷ್ಠ | ಕನಿಷ್ಠ |
|---|---|---|---|---|---|---|
| BA/BSc I, III &V | 20 | 20 | NA | NA | **40** | **16** |
| MA/MSc I & III | 10 | 10 | 10 | NA | **30** | **12** |

1. NA = **Not Applicable** = ಸಂಬಂಧಿಸಿರುವುದಿಲ್ಲ ಎಂದರ್ಥ.
2. ಆಂತರಿಕ ಅಂಕಗಳನ್ನು ಹಾಗೂ ಹಾಜರಾತಿಯನ್ನು UUCMS ಪೋರ್ಟಲ್‌ನಲ್ಲಿ ಸರಿಯಾಗಿ ದಾಖಲಿಸದಿದ್ದಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶಪತ್ರವನ್ನು ಪಡೆಯಲು ಸಾಧ್ಯವಾಗುವುದಿಲ್ಲ.
3. ಸ್ಕೀಮ್ ನ್ನು ಸರಿಯಾಗಿ ಗಮನಿಸಿ ಆಂತರಿಕ ಅಂಕಗಳನ್ನು ನೀಡಬೇಕು. ಬೇರೆ ಬೇರೆ ಸ್ಕೀಮ್‌ಗಳಲ್ಲಿ ಆಂತರಿಕ ಅಂಕಗಳ ವಿಭಾಗಕ್ರಮ ವ್ಯತ್ಯಾಸವಿರುವುದನ್ನು ಗಮನಿಸಿಕೊಳ್ಳುವುದು.
4. ಆಂತರಿಕ ಅಂಕಗಳನ್ನು ಮ್ಯಾಪ್ ಮಾಡುವಾಗ ಗರಿಷ್ಠಾಂಕವನ್ನು ಕೋಷ್ಠಕದಲ್ಲಿ ನೀಡಿದಂತೆಯೇ ನೀಡಬೇಕು.
5. ಆಂತರಿಕ ಅಂಕಗಳು ಒಟ್ಟು ಸೇರಿದಾಗ ಕನಿಷ್ಠಾಂಕಕ್ಕಿಂತ ಕಡಿಮೆ ಬಂದಲ್ಲಿ, ಲೇಖನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೂ ಒಟ್ಟು ಫಲಿತಾಂಶದಲ್ಲಿ ಆ ವಿದ್ಯಾರ್ಥಿಯು ಅನುತ್ತೀರ್ಣನಾಗುತ್ತಾನೆ. ಬರವಣಿಗೆಯ ಪರೀಕ್ಷೆಯಂತೆ ಆಂತರಿಕ ಅಂಕದಲ್ಲಿಯೂ ನಿಗದಿಪಡಿಸಿದ ಕನಿಷ್ಠಾಂಕಗಳನ್ನು ಪಡೆದರೆ ಮಾತ್ರ ವಿದ್ಯಾರ್ಥಿಯು ತೇರ್ಗಡೆ ಹೊಂದುತ್ತಾನೆ.

6. ವಿಶ್ವವಿದ್ಯಾಲಯವು ಅಂತಿಮ ಫಲಿತಾಂಶವನ್ನು ಪ್ರಕಟಿಸಿದ ನಂತರ ಆಂತರಿಕ ಅಂಕಗಳನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
7. ತಾಂತ್ರಿಕ ಕಾರಣಗಳಿಗಾಗಿ ವೇದ ವಿಭಾಗದಲ್ಲಿಯೂ ಎಲ್ಲ ಪತ್ರಿಕೆಗಳಲ್ಲಿಯೂ ಶಾಸ್ತ್ರಿ–ಬಿ.ಎ. ಪದವಿಯಲ್ಲಿ 60–40, ಹಾಗೂ ಆಚಾರ್ಯ–ಎಂ.ಎ. ಪದವಿಯಲ್ಲಿ 70–30 ಮಾದರಿಯಲ್ಲಿಯೇ ಅಂಕಗಳನ್ನು ನೀಡುವುದು.
8. ವೇದ ವಿದ್ಯಾರ್ಥಿಗಳಿಗೆ ಮೌಖಿಕ ಪರೀಕ್ಷೆಯೇ ಪ್ರಧಾನವಾದ್ದರಿಂದ ಆಂತರಿಕ ಅಂಕ ವಿಭಾಗದಲ್ಲಿಯೂ ಅಸೈನ್ಮೆಂಟ್/ಟೆಸ್ಟ್ ಸ್ಥಾನದಲ್ಲಿ ಮೌಖಿಕ ಪರೀಕ್ಷೆಯನ್ನೇ ನಡೆಸಿ ಅಂಕಗಳನ್ನು ನೀಡಬಹುದು. ತಾಂತ್ರಿಕ ಕಾರಣಗಳಿಗಾಗಿ ಅಸೈನ್ಮೆಂಟ್/ಟೆಸ್ಟ್ ವಿಭಾಗಗಳನ್ನು ನೀಡಲಾಗಿದೆ. ಅಂಕಗಳನ್ನು ಆಯಾ ವಿಭಾಗಗಳಲ್ಲಿ ಪ್ರತ್ಯೇಕವಾಗಿ ನಮೂದಿಸುವುದು ಕಡ್ಡಾಯವಾಗಿದೆ.
9. ಎಲ್ಲ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಕುರಿತಾದ ದಾಖಲೆಗಳನ್ನು – ಶಾಸ್ತ್ರ ವಿದ್ಯಾರ್ಥಿಗಳ ಅಸೈನ್ಮೆಂಟ್, ಟೆಸ್ಟ್ ಪೇಪರ್, ಪರೀಕ್ಷಾ ಹಾಜರಾತಿ ಪಟ್ಟಿ, ಅಧ್ಯಾಪಕರಿಂದ ದೃಢೀಕರಿಸಿದ ಅಂಕಪಟ್ಟಿ ಇತ್ಯಾದಿ ಹಾಗೂ ವೇದ ವಿದ್ಯಾರ್ಥಿಗಳ ಅಧ್ಯಾಪಕರಿಂದ ದೃಢೀಕರಿಸಿದ ಮೌಖಿಕ ಪರೀಕ್ಷೆಯ ಅಂಕಪಟ್ಟಿ, ಪರೀಕ್ಷಾ ಹಾಜರಾತಿ ಪಟ್ಟಿಗಳನ್ನು ವಿದ್ಯಾಲಯದಲ್ಲಿ ವ್ಯವಸ್ಥಿತವಾಗಿ ಸಂರಕ್ಷಿಸಿಡುವುದು ಕಡ್ಡಾಯವಾಗಿರುತ್ತದೆ.

**ಆದೇಶದ ಮೇರೆಗೆ,**

25/1/24

**ಕುಲಸಚಿವರು(ಮೌಲ್ಯಮಾಪನ)**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಬೆಂಗಳೂರು

Registrar (E)
Karnataka Samskrit University
Bengaluru - 560018

ಇವರಿಗೆ,

1. **ನಿರ್ದೇಶಕರು,** ಅಧ್ಯಯನಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
2. **ವಿಭಾಗಾಧ್ಯಕ್ಷರು,** ಸಂಸ್ಕೃತ ಭಾಷೆ & ಸಾಹಿತ್ಯ / ಅಲಂಕಾರ / ವ್ಯಾಕರಣ / ನ್ಯಾಯ & ವೈಶೇಷಿಕ / ಹಸ್ತಪ್ರತಿಶಾಸ್ತ್ರ / ವೇದಾಂತ / ಸಾಂಖ್ಯ & ಯೋಗ / ಸಮಾಲೋಚನೆ & ಯೋಗಚಿಕಿತ್ಸೆ –ವಿಭಾಗಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
3. **ಪ್ರಾಚಾರ್ಯರು,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆಗೊಳಪಟ್ಟ ಸಂಸ್ಕೃತ ಮಹಾವಿದ್ಯಾಲಯಗಳು

**ಪ್ರತಿಗಳು:**

1. **ಮಾನ್ಯ ಕುಲಪತಿಗಳ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
2. **ಮಾನ್ಯ ಕುಲಸಚಿವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
3. **ಹಣಕಾಸು ವಿಭಾಗ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು
4. **ನೋಡಲ್ ಅಧಿಕಾರಿಗಳು,** ಇ–ಆಡಳಿತ ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಗತ್ಯ ಕ್ರಮಕ್ಕಾಗಿ
5. ಕಛೇರಿ ಪ್ರತಿ

# SAMPLE

| FORM-01 | | | | | | | | | |
|---|---|---|---|---|---|---|---|---|---|
| KARNATAKA SAMSKRIT UNIVERSITY, CHAMARAJPETE, BENGALURU-560018 | | | | | | | | | |
| NAME OF THE COLLEGE & CODE: | | | | | | | | | |
| SL. NO | REG NO | NAME OF THE STUDENTS | FATHER'S NAME | SUBJECT | I | II | III | IV | V |
| 1 | | SHRUTHI H M | MUNIYAPPA | ALANKARA | | | | | |
| 2 | | SHRIVANI K E | APPORAO K | ALANKARA | | | | | |
| 3 | | SURESH BABU | RAMASWAMY | VYAKARANA | | | | | |
| 4 | | VINUTHA B T | THIPPESWAMY | VYAKARANA | | | | | |

| DETAILS OF NR | | | |
|---|---|---|---|
| SL.NO | CLASS | SUBJECT | NUMBER OF STUDENTS |
| 1 | MA- I SEM | ALANKARA | 01 |
| 2 | MA-III SEM | SV VEDANTA | 01 |
| NO OF STUDENTS: | | | 02 |
| Email ID of college: | | | |
| Principal's Contact Number: | | | |

| FORM-02 | | | | | | | | |
|---|---|---|---|---|---|---|---|---|
| KARNATAKA SAMSKRIT UNIVERSITY, CHAMARAJPETE, BENGALURU-560018 | | | | | | | | |
| NAME OF THE COLLEGE & CODE: | | | | | | | | |
| SL. NO. | NAME OF THE STUDENTS | COURSE | FATHER'S NAME | MOTHER'S NAME | GENDER | CASTE | FEE PAID | UPI NO |
| 1 | SHRUTHI H M | BA I SEM | MUNIYAPPA | RANGAMMA | FEMALE | GEN | 400.00 | T21210456099 |
| 2 | SHRIVANI K E | BA III SEM | APPORAO K | VASUMATI | FEMALE | SC/ST | 225.00 | T21210456099 |
| 3 | SURESH | BA V SEM | RAMASWAMY | SAVITHRI | MALE | GEN | 500.00 | T21210456099 |
| 4 | VINUTHA B T | BSc I SEM | THIPPAYYA | GAYATRI | FEMALE | C-I | 200.00 | T21210456099 |
| 5 | ARNAVACHARYA | MA I SEM | VENKATESH | MANDARA | MALE | GEN | 700.00 | T21210456099 |
| 6 | ASHWINI | MA III SEM | SHREEKANTA | PREMA | FEMALE | SC/ST | 350.00 | T21210456099 |
| 7 | BHARATISH.A | MSc I SEM | ACHUTARAO.G | SHANTHA | MALE | GEN | 700.00 | T21210456099 |
| 8 | CHANDRIKA | MSc III SEM | GOPAL | PADMA | FEMALE | C-I | 350.00 | T21210456099 |

| DETAILS OF NR | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| SL. NO. | CLASS | SC | | ST | | CAT-I | | OBC | | GM | | REPEATER | | TOTAL | |
| | | M | F | M | F | M | F | M | F | M | F | M | F | M | F |
| 1 | BA-I | 1 | 0 | 0 | 1 | 0 | 1 | 1 | 0 | 2 | 1 | 2 | 1 | 6 | 4 |
| 2 | BA-III | 1 | 0 | 0 | 1 | 0 | 0 | 1 | 0 | 2 | 1 | 2 | 1 | 6 | 3 |
| 3 | BA-V | 0 | 1 | 1 | 0 | 1 | 0 | 1 | 0 | 1 | 2 | 0 | 0 | 4 | 3 |
| 4 | MA-I | 0 | 1 | 1 | 0 | 1 | 0 | 1 | 1 | 0 | 2 | 3 | 1 | 6 | 5 |
| 5 | MA-III | 1 | 0 | 1 | 0 | 0 | 1 | 1 | 1 | 1 | 1 | 3 | 1 | 7 | 4 |
| TOTAL | | 3 | 2 | 3 | 2 | 2 | 3 | 5 | 2 | 6 | 7 | 10 | 4 | 29 | 13 |
| PRINCIPAL CONTACT NUMBER & E.MAIL ID OF COLLEGE: | | | | | | | | | | | | | | | |